## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 477 |
| ಸದಸ್ಯರ ಹೆಸರು | : | ಡಾ. ಚಂದ್ರಶೇಖರ್ ಬಿ. ಪಾಟೀಲ್ |
| ಉತ್ತರಿಸುವ ದಿನಾಂಕ | : | 13/12/2018 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಪದವಿಪೂರ್ವ ಕಾಲೇಜು, ಅನುದಾನಿತ ಡಿಪ್ಲೊಮಾ ಕಾಲೇಜು, ಅನುದಾನಿತ ಪ್ರೌಢಶಾಲೆ, ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ, ಸಹ ಶಿಕ್ಷಕರಿಗೆ ಹಾಗೂ ಬೋಧಕೇತರ ನೌಕರರಿಗೆ ಕಾಲ್ಪನಿಕ ವೇತನ ಮಂಜೂರಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು; | (1) ಕರ್ನಾಟಕ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ (ವೇತನ, ಪಿಂಚಣಿ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಕಾಯ್ದೆ 2014 (ಕರ್ನಾಟಕ ಕಾಯ್ದೆ 7/2014)ನ್ನು ಜಾರಿಗೊಳಿಸಲಾಗಿದೆ. ಸದರಿ ಕಾಯ್ದೆಯು ದಿನಾಂಕ: 01/06/1995ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಿರುತ್ತದೆ ಮುಖ್ಯಾಂಶಗಳು ಈ ಕೆಳಗಿನಂತಿವೆ :-<br>a) ಸಿಬ್ಬಂದಿಯ ವೇತನ, ರಜೆ, ಜೇಷ್ಠತೆ, ಸ್ವಯಂಚಾಲಿತ ಮುಂಬಡ್ತಿ ಯೋಜನೆ/ನೌಕರಿ ಮುಂಬಡ್ತಿ ಯೋಜನೆಯ ಉದ್ದೇಶಕ್ಕಾಗಿ ಮತ್ತು ನಿವೃತ್ತಿ ವೇತನ ಪ್ರಯೋಜನಗಳನ್ನು ಇತ್ಯರ್ಥಗೊಳಿಸುವಲ್ಲಿ ಅನುದಾನರಹಿತ ಅವಧಿಯಲ್ಲಿ ಸಲ್ಲಿಸಲಾದ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು.<br>b) ಸರ್ಕಾರದ ಯಾವುದೇ ಆದೇಶ ಅಥವಾ ನ್ಯಾಯಾಧೀಕರಣ ನೀಡಿದ ಯಾವುದೇ ತೀರ್ಪಿನಲ್ಲಿ ಏನೇ ಇದ್ದರೂ, ಅನುದಾನರಹಿತ ಸೇವೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಯ ಕ್ಲೇಮುಗಳನ್ನು ಅಂತಿಮಗೊಳಿಸುವುದು;<br>c) ಕಾಲಬದ್ಧ ಮುಂಬಡ್ತಿ/ಸ್ವಯಂಚಾಲಿತ ಮುಂಬಡ್ತಿ/ನೌಕರಿ ಮುಂಬಡ್ತಿ/ ನಿವೃತ್ತಿ ವೇತನ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಂದಾಯ ಮಾಡಲಾದ ಯಾವುದೇ ಮೊತ್ತವನ್ನು ವಸೂಲಿ ಮಾಡದಿರುವುದು;<br>d) ಸರ್ಕಾರದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಅಥವಾ ಇತರೆ ವ್ಯವಹರಣೆಗಳನ್ನು ನಿರ್ವಹಿಸದಿರುವಂತೆ ಅಥವಾ ಮುಂದುವರೆಸದಿರುವಂತೆ ಮತ್ತು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಸಹಾಯಾನುದಾನವನ್ನು ಬಿಡುಗಡೆಗೊಳಿಸುವಂತೆ ಮತ್ತು ನಿವೃತ್ತಿ ವೇತನವನ್ನು ಅಂತಿಮಗೊಳಿಸುವಂತೆ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯವು ಜಾರಿಗೊಳಿಸತಕ್ಕದ್ದಲ್ಲ. |

| | | |
|---|---|---|
| | | (4) ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014ನ್ನು ಪ್ರಶ್ನಿಸಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ರಿಟ್ ಅರ್ಜಿಗಳಾದ 21216/2014 ಮತ್ತು 14307/2014 ಮತ್ತು ತತ್ಸಂಬಂಧದ ಪ್ರಕರಣದಲ್ಲಿ ನ್ಯಾಯಾಲಯವು ದಿನಾಂಕ : 10/07/2015ರಂದು ತೀರ್ಮ ನೀಡಿ ಪ್ರಸ್ತಾಪಿತ ಅಧಿನಿಯಮವನ್ನು "struck down" ಮಾಡಿರುತ್ತದೆ. ಸದರಿ ರಿಟ್ ಅರ್ಜಿಗಳಲ್ಲಿ ನೀಡಿದ ತೀರ್ಪನ್ನು ಪ್ರಶ್ನಿಸಿ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ರಿಟ್ ಅಪೀಲು ಸಂಖ್ಯೆ : 2476/2015 ಮತ್ತು 2467/2015ನ್ನು ದಾಖಲಿಸಿದೆ. ಸರ್ಕಾರವು ಸಲ್ಲಿಸಿದ ಅಪೀಲಿನಲ್ಲಿ ಮಾನ್ಯ ನ್ಯಾಯಾಲಯವು ಮೇಲಿನ ರಿಟ್ ಅರ್ಜಿಗಳಲ್ಲಿ ನೀಡಿದ ತೀರ್ಪಿಗೆ ದಿನಾಂಕ : 27/11/2015ರಂದು ತಡೆಯಾಜ್ಞೆ ನೀಡಿದ್ದು, ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. |
| ಇ) | ಈ ಹಿಂದೆ ಸರ್ಕಾರವೇ ಕಾಲ್ಪನಿಕ ವೇತನಕ್ಕೆ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯವರು ನೀಡಿರುವ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಲು ಬೇಕಾಗಿರುವ ಕಾಲಾವಕಾಶವೆಷ್ಟು; ಈ ಬಗ್ಗೆ ಸರ್ಕಾರದ ಮುಂದಿನ ನಿಲುವೇನು? | ಕಾಲ್ಪನಿಕ ವೇತನ ನಿಗಧಿ ಕುರಿತಂತೆ ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ವಿಧಾನ ಪರಿಷತ್ತು ಸದಸ್ಯರು, ಇವರನ್ನೊಳಗೊಂಡ ಸದಸ್ಯರು ದಿನಾಂಕ : 15/07/2015 ಮತ್ತು 06/02/2018ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ, ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಯಾವುದೇ ನಿಲುವು ತೆಗೆದುಕೊಂಡಿರುವುದಿಲ್ಲ. |

(ಹೆಚ್. ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ

ಸಂಖ್ಯೆ: ಇಡಿ 686 ಎಸ್ಇಎಸ್ 2018)